ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 114-120
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹಸಿರು ಸಾಹಿತ್ಯದಲ್ಲಿ ಭೂಮಿತತ್ತ್ವ

**ಸುಕನ್ಯ ಟಿ. ಎಲ್**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ, ತುಮಕೂರು ಜಿಲ್ಲೆ

***Abstract:***

*ಈ ಜೀವ ಸಂಕುಲವೇ ಅತ್ಯದ್ಭುತವಾದದ್ದು, ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಇಂತ ಪ್ರಕೃತಿದತ್ತವಾದ ಜಗತ್ತಿನಲ್ಲಿ ನಾವು ಮತ್ತು ನಮ್ಮ ಒಡನಾಡಿಗಳಿರುವುದು. ಇದು ದೈವದತ್ತ ಕೊಡುಗೆ, ಸಕಲಜೀವರಾಶಿಗಳಿಗೂ ಜೀವ ತುಂಬುವುದೇ ಹಸಿರು. "ಹಸಿರೇ ಉಸಿರು, ಹಸಿರೇ ಹೆಸರು". ಇದು ಕಾಮನಬಿಲ್ಲಿನಲ್ಲಿರುವ ಏಳು ಬಣ್ಣಗಳಲ್ಲಿ ಒಂದು ಬಣ್ಣವಾದರೂ, ಬೇರೆ ಬಣ್ಣಗಳಿಗೆ ಹೋಲಿಸಿದರೆ ಹಸಿರು ಅತ್ಯಂತ ಪ್ರಮುಖವಾದ ಸ್ಥಾನದಲ್ಲಿ ನಿಲ್ಲುತ್ತದೆ. ಕಣ್ಣಿಗೆ ತಂಪು ನೀಡುವುದು ಹಸಿರು, ಮನಸ್ಸಿಗೆ ಶಾಂತಿ ನೀಡುವುದು ಹಸಿರು. ಶುಭ ಸೂಚಕ ಹಸಿರು, ಸಮೃದ್ಧಿ ಮತ್ತು ಸಂಪತ್ತಿನ ಸಂಕೇತ ಹಸಿರು. ಇಂತ ಹಸಿರನ್ನು ಕುರಿತು ರಚನೆಯಾಗಿರುವ ಸಾಹಿತ್ಯವೇ "ಹಸಿರು ಸಾಹಿತ್ಯ".*

**Keywords:** *ಕನ್ನಡ ಸಾಹಿತ್ಯ, ಹಸಿರು ಸಾಹಿತ್ಯ, ಭೂಮಿತತ್ತ್ವ, ಪ್ರಕೃತಿತತ್ತ್ವ.*

**ಪೀಠಿಕೆ**

ನಮ್ಮ ಕನ್ನಡ ಸಾಹಿತ್ಯದಲ್ಲಿ ಸಮೃದ್ಧವಾದ ಹಸಿರು ಸಾಹಿತ್ಯವನ್ನು ಕಾಣಬಹುದು. ಪ್ರಾಚೀನ ಕನ್ನಡ ಸಾಹಿತ್ಯದಿಂದ ಇಂದಿನ ಆಧುನಿಕ ಸಾಹಿತ್ಯದವರೆಗೂ ಹಸಿರು ಸಾಹಿತ್ಯವು ಕನ್ನಡದಲ್ಲಿ ಹಚ್ಚ ಹಸುರಾಗಿ ಹಾಸು ಹೊಕ್ಕಾಗಿ ಹರಡಿಕೊಂಡು ಬೆಳೆದು ಬಂದಿದೆ. "ಹಸಿರು ಸಾಹಿತ್ಯ"ವು ಭೂಮಿ, ಮಳೆ, ಮಣ್ಣು, ಬೀಜ, ಕಸ, ಗೊಬ್ಬರ, ಕೃಷಿ, ಬೆಳೆ, ಫಸಲು ಎಲ್ಲವನ್ನೂ ಒಳಗೊಂಡಿದೆ. ಇದು ಜೀವವೈವಿಧ್ಯತೆಯಿಂದ ಕೂಡಿರುವಂತದ್ದು, ಸಹಜ ಜೀವನಯಾನವಿದ್ದಂತೆ. ನಭೋ ಮಂಡಲದಲ್ಲಿರುವ ಭೂಮಿ ಎಂಬ ಗ್ರಹದಲ್ಲಿರುವ ನಾವುಗಳು ನಮ್ಮ ಸ್ವಾರ್ಥದಿಂದಷ್ಟೇ ಯೋಚಿಸದೆ, ಸಕಲ ಜೀವಕೋಟಿಗಳ ಕುರಿತು ಯೋಚಿಸಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವಾಗಬೇಕು.

ಕನ್ನಡ ಸಾಹಿತ್ಯದಲ್ಲಿ "ಹಸಿರು ಸಾಹಿತ್ಯ"ದ ಅಧ್ಯಯನವು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಭೂಮಿ, ಮಣ್ಣು, ಬೀಜ, ಬೆಳೆ, ಫಸಲು, ಪ್ರಕೃತಿ, ಪರಿಸರ ಕುರಿತಂತೆ ಹಲವಾರು ಕಥೆ, ಕಾದಂಬರಿ, ಸಣ್ಣಕಥೆಗಳು, ವೈಜ್ಞಾನಿಕ ಬರವಣಿಗೆಗಳು ಸಾಕಷ್ಟು ರಚನೆಗೊಂಡಿವೆ. ಇವೆಲ್ಲಾ ಮನುಷ್ಯ ಸಂಕುಲದ ಉಳಿವಿಗಾಗಿ ಮೂಲವಾದ ಹಸಿರನ್ನೇ ಕುರಿತು ಪ್ರತಿಪಾದಿಸುತ್ತವೆ. ಈ ಕುರಿತು ಹಲವಾರು ವೈಜ್ಞಾನಿಕ ಅಧ್ಯಯನಗಳೂ ಕೂಡ ನಡೆದಿವೆ. ಕಾಲ ಬದಲಾದಂತೆ ಹಸಿರು ಸಾಹಿತ್ಯದ ಬರವಣಿಗೆಯಲ್ಲೂ ಕೆಲವೊಂದು ಬದಲಾವಣೆಯನ್ನು ಕಾಣುತ್ತೇವೆ. ಭೂ ಹಿಡುವಳಿ ಪದ್ಧತಿ, ಗೇಣಿ ಪದ್ಧತಿ, ಉಳುವವನೇ ಭೂಒಡೆಯ ಹೀಗೆ ಹಲವಾರು ಪರಿಕಲ್ಪನೆಗಳಲ್ಲಿ ಹಸಿರು ಸಾಹಿತ್ಯವು ತನ್ನದೇ ಆದ ಸ್ಥಾನವನ್ನು

***Please cite this article as:*** ಸುಕನ್ಯ. ಟಿ.ಎಲ್. (2024). ಹಸಿರು ಸಾಹಿತ್ಯದಲ್ಲಿ ಭೂಮಿತತ್ತ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(3), 114–120

ಉಳಿಸಿಕೊಂಡಿದೆ. ಶ್ರೀಮಂತರ ಸ್ವತ್ತಾಗಿದ್ದರೂ ಬಡವರ ಪಾಲಿನ ಭಾಗ್ಯದಂತೆ ಕೃಷಿಭೂಮಿಯನ್ನು ಉಳುವ ರೈತರು ತಮ್ಮ ನೈತಿಕತೆಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ.

**ವೈಜ್ಞಾನಿಕವಾಗಿ ಭೂಮಿಯ ಪರಿಕಲ್ಪನೆ**

ಭೂಮಿಯನ್ನು ದೇವರು ಎಂದು ಪೂಜಿಸುತ್ತೇವೆ. ಸೌರಮಂಡಲದ 5ನೇ ಅತ್ಯಂತ ದೊಡ್ಡ ಗ್ರಹ ಭೂಮಿ. ಜೀವ ಸಂಕುಲವನ್ನು ಜೀವ ವೈವಿಧ್ಯತೆಯನ್ನು ಈ ಭೂ ತಾಯಿ ಜತನದಿಂದ ಸಲಹುತ್ತಿದ್ದಾಳೆ. ನೀರು, ಗಿಡ, ಮರ ಹೀಗೆ ಎಲ್ಲಾ ಜೀವ ಸಂಕುಲ ಬದುಕಬೇಕಾದರೆ ಭೂಮಿ ಅಗತ್ಯ ಮತ್ತು ಅನಿವಾರ್ಯವಾಗಿದೆ. ಈ ಭೂಮಿಯನ್ನು ಸಂರಕ್ಷಿಸುವ ಮಾತುಗಳು ಬಂದಾಗ "ಇರುವುದೊಂದೇ ಭೂಮಿ" ಎಂದು ಸಂಭೋಧಿಸುವುದು ಸಾಮಾನ್ಯ. ಭೂಮಿಯ ಕಲ್ಪನೆ, ಭೂಮಿತತ್ತ್ವದ ಕುರಿತು ಹಲವಾರು ಸಾಹಿತಿಗಳು ತಮ್ಮ ಸಾಹಿತ್ಯ ರಚನೆಯಲ್ಲಿ ಮೂಡಿಸಿರುವ ಚಿಂತನೆಗಳನ್ನು ಅಧ್ಯಯನ ಮಾಡಿ, ಈ ಸಂಶೋಧನಾ ಲೇಖನದಲ್ಲಿ ದಾಖಲಿಸುತ್ತಿದ್ದೇನೆ.

ಭೂಮಿ ಅಸ್ತಿತ್ವಕ್ಕೆ ಬಂದಂದಿನಿಂದ ಅದರ ಪರಿಸರದಲ್ಲಿ ಸತತವಾಗಿ ಸ್ಥಿತ್ಯಂತರಗಳು ಆಗುತ್ತಲೇ ಬಂದಿವೆ. ಈ 460 ಕೋಟಿ ವರ್ಷಗಳಲ್ಲಿ ಮೊದಲು ನೂರಾರು ಕೋಟಿ ವರ್ಷಗಳವರೆಗೆ ಭೂಗ್ರಹಕ್ಕೆ ಉಲ್ಕಾ ಬಂಡೆಗಳು, ಕ್ಷುದ್ರ ಗ್ರಹಗಳು ಪದೇ ಪದೇ ಅಪ್ಪಳಿಸುತ್ತಿದ್ದುದರಿಂದ ಜೀವಸೃಷ್ಟಿಯ ಅವಕಾಶವೂ ಇರಲಿಲ್ಲ. ಆ ಅವಧಿಯಲ್ಲಿ ಬಾಹ್ಯ ಕಾಯಗಳೇ ಭೂಮಿಯ ಭವಿಷ್ಯವನ್ನು ನಿರ್ಧರಿಸುವಷ್ಟು ಬಲಾಢ್ಯವಾಗಿದ್ದವು. ಆಗಿನ ಆ ಪ್ರಳಯಾಂತಕ ಹೊಡೆತಗಳನ್ನು ಸಹಿಸಿಕೊಂಡ ಪೃಥ್ವಿ ಕ್ರಮೇಣ ತನ್ನನ್ನು ತಾನೇ ಸೀಮಿತಗೊಳಿಸಿಕೊಂಡು ಜೀವಾಂಕುರಕ್ಕೆ ಅವಕಾಶ ಮಾಡಿಕೊಟ್ಟಿತು.ಕಳೆದ 460 ಕೋಟಿ ವರ್ಷಗಳಿಂದ ಭೂಲಕ್ಷಣಗಳನ್ನು ಬದಲಾಯಿಸಬಲ್ಲ ತಾಕತ್ತಿದ್ದ ಶಕ್ತಿಗಳೆಂದರೆ, ಸೂರ್ಯನ ಶಾಖ, ಉಲ್ಕೆ ಮತ್ತು ಧೂಮಕೇತುಗಳು. ಅನಂತರ ಭೂಮಿಯದೇ ಆದ ಗುರುತ್ವಾಕರ್ಷಣೆ, ಜ್ವಾಲಾಮುಖಿ, ನೀರು, ಗಾಳಿ ಆಗಿದ್ದವು. ಇವುಗಳ ಜೊತೆಗೆ ಸೀಮಿತ ಶಕ್ತಿಯ ಜೀವಿಗಳೂ ಸೇರಿ, ನೂರಾರು ಕೋಟಿ ವರ್ಷಗಳ ಸತತ ಕಾರ್ಯಾಚರಣೆಯಿಂದ ಭೂಮಿಯನ್ನು ಈಗಿನ ರೂಪಕ್ಕೆ ತಂದಿವೆ. ಮಾನವನ ಉಗಮಕ್ಕೆ ದಾರಿ ಮಾಡಿಕೊಟ್ಟಿವೆ.

ಭೂಮಿಯ ವಾತಾವರಣವೂ ಗಾಜಿನ ಮನೆಯಂತೆಯೇ ಶಾಖವನ್ನು ಹಿಡಿದಿಟ್ಟುಕೊಳ್ಳುತ್ತದೆ. ಭೂಮಿಗೆ ವಾಯುವಿನ ಕವಚ ಇರದೇ ಇದ್ದಿದ್ದರೆ ಸೂರ್ಯನಿಂದ ಬಂದ ಶಾಖವೆಲ್ಲ ಮತ್ತೆ ಬಾಹ್ಯಾಕಾಶಕ್ಕೆ ಹಾರಿ ಹೋಗುತ್ತಿತ್ತು. ವಾತಾವರಣ ಇರದೇ ಇದ್ದಿದ್ದರೆ ಭೂಮಿಯ ಸರಾಸರಿ ತಾಪಮಾನ ಈಗ ಇರುವುದಕ್ಕಿಂತ ಸುಮಾರು 33 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ಇರುತ್ತಿತ್ತು. ಮಂಗಳಗ್ರಹದಲ್ಲಿ ಇದ್ದ ಹಾಗೆ ಭೂಮಿಯ ಮೇಲೂ ಬರೀ ಬರಡು ನೆಲವೇ ಕಾಣಬರುತ್ತಿತ್ತು. ವಾತಾವರಣದಲ್ಲಿ ಶಾಖವನ್ನು ತಕ್ಕಮಟ್ಟಿಗೆ ಹೀರಿಕೊಳ್ಳಬಲ್ಲ ಮುಖ್ಯ ಘಟಕಗಳೆಂದರೆ ಇಂಗಾಲದ ಡೈಆಕ್ಸೈಡ್, ಮೀಥೇನ್, ನೈಟ್ರೋಜನ್ ಆಕ್ಸೈಡ್‌ಗಳು, ಓಝೋನ್ ಮತ್ತು ನೀರಿನ ಆವಿ. ಇವುಗಳನ್ನು "ಶಾಕವರ್ಧಕ ಅನಿಲಗಳು" ಅಥವಾ "ಹಸುರುಮನೆ ಅನಿಲಗಳು" ಎಂತಲೂ ಹೇಳುತ್ತಾರೆ. ಭೂಮಿಯಿಂದ ಪ್ರತಿಫಲಿಸಿ ಬಂದ ಶಾಖವನ್ನು ಈ ಅನಿಲಗಳು ಅಲ್ಲೇ ಹಿಡಿದಿಡುತ್ತವೆ, ಭೂಮಿ ಬೆಚ್ಚಗಿರುತ್ತದೆ.

ಈ ಭೂಮಿ ಮಾನವನ ಪಿತ್ರಾರ್ಜಿತ ಆಸ್ತಿಯಲ್ಲ, ಇತರ ಅಸಂಖ್ಯ ಜೀವಿಗಳಂತೆ ಮಾನವ ಕೂಡ ಒಂದು ಜೀವಿ ಅಷ್ಟೆ. ಜೀವಿಗಳ ಈ ಸಂಕೀರ್ಣ ಜಾಲವನ್ನು ಮಾನವ ನೇಯ್ದುದ್ದಲ್ಲ. ಆತ ಈ ಜಾಲದ ಒಂದು ಎಳೆ ಅಷ್ಟೆ. ಈ ಜಾಲಕ್ಕೆ ಮಾನವ ಏನೇ ವಿಪತ್ತು ತಂದರೂ ಆತ ತನಗೆ ತಾನೇ ವಿಪತ್ತು ತಂದುಕೊಂಡಂತೆ. ಈ ಭೂಮಿಗೆ ದುರ್ಗತಿ ಬಂತೆಂದರೆ ಮಾನವನಿಗೂ ಅದೇ ಗತಿ ಬಂತೆಂದೇ ಅರ್ಥ. ಇಲ್ಲಿ ಎಲ್ಲವೂ ಒಂದಕ್ಕೊಂದು ತುಳುಕು

ಹಾಕಿಕೊಂಡಿವೆ. ಇನ್ನೊಂದು ದೃಷ್ಟಿಯಲ್ಲಿ ನಮಗೆಲ್ಲ ನೆಮ್ಮದಿ, ಹೆಮ್ಮೆ ಮೂಡಿಸಿದ ಕಲ್ಪನೆ ಇದು. ಇಡೀ ವಿಶ್ವದಲ್ಲೇ ಜೀವಂತ ಸೃಷ್ಟಿಯೊಂದನ್ನು ಸೃಷ್ಟಿಸಿದ ಪುಟ್ಟ, ಸುಂದರ ಭೂಮಿ. ನಮ್ಮೆಲ್ಲರ ಪ್ರೀತಿಯ ಮಾತೃಭೂಮಿ. ಹಸಿರು ನೀಲಾಂಬರ ಭೂಷಿತೆ.

ಭೂಮಿ ಒಂದು ಗಗನನೌಕೆ ಎಂಬ ಕಲ್ಪನೆ ಬಂದ ಮೇಲೆ ಈ ನೌಕೆಯಲ್ಲಿ ಎಲ್ಲೆಲ್ಲಿ ಎಂತೆಂಥ ಸ್ವಿಚ್ಚುಗಳು, ಲಿವರ್, ಗಿಯರ್, ಆಕ್ಸಿಜನ್ ಸಿಲಿಂಡರ್ ಇವೆಯೆಂಬುದು ನಮಗೆ ಗೊತ್ತಾಗಬೇಕು. ಅವನ್ನೆಲ್ಲ ಅರ್ಥ ಮಾಡಿಕೊಳ್ಳುವ ಮೊದಲೇ ಕಿತ್ತಾಡುತ್ತಿದ್ದೇವೆ, ಕಿತ್ತು ಬಿಸಾಡುತ್ತಿದ್ದೇವೆ. ನೌಕೆ ಬಿಸಿಯಾಯಿತೆಂದೋ, ಇಂಗಾಲದ ಡೈಯಾಕ್ಸೈಡ್ ಹೆಚ್ಚಿತೆಂದೋ, ಓಜೋನ್ ಕವಚ ಛಿದ್ರವಾಯಿತೆಂದೋ ಹೊಯ್ದಾಡುತ್ತಿದ್ದೇವೆ. ಮುಂದಿನ ಪೀಳಿಗೆಯವರಿಂದ ಈ ನೌಕೆಯನ್ನು ಎರವಲು ಪಡೆದದ್ದು ಎಂಬುದರ ಪರಿವೆ ಇಲ್ಲದೇ, ಮುತ್ತಜ್ಜನ ಆಸ್ತಿಯೆಂಬಂತೆ ಇಲ್ಲಿನ ಪರಿಕರಗಳನ್ನು ಧ್ವಂಸ ಮಾಡುತ್ತಿದ್ದೇವೆ. ಮುಂದಿನ ಜೀವಿಗಳಿಗೆಂದು ಈ ನಿಸರ್ಗ ನಿರ್ಮಿತ ನೌಕೆಯ ಸರಂಜಾಮುಗಳನ್ನು ರಕ್ಷಿಸುವ ಬದಲು ನಾವೇ ಮಹಾಮಹಿಮರೆಂದು ಭಾವಿಸಿ ನಮ್ಮದೇ ಚರಿತ್ರೆಯನ್ನೋ ಶಿಥಿಲವಾದ ಕೋಟೆ ಕೊತ್ತಲಗಳನ್ನೋ ಕಾಪಾಡಲು ಹೆಚ್ಚಿನ ಆಸಕ್ತಿ ವಹಿಸುತ್ತಿದ್ದೇವೆ.

ಮಾನವನ ಅಜ್ಞಾನ, ಆಸೆಬುರುಕುತನ ಹಾಗೂ ಜೀವಿಗಳ ಬಗೆಗಿನ ಅಸಡ್ಡೆಯಿಂದಾಗಿಯೇ ನಿಸರ್ಗ ಧ್ವಂಸವಾಗುತ್ತಿದೆ. ಅಜ್ಞಾನವೊಂದರಿಂದಾಗಿಯೇ ಈ ಹಿಂದೆ ಮನುಷ್ಯ ಹಾಳುಗೆಡವಿದ್ದನ್ನೆಲ್ಲ ಕ್ಷಮಿಸಿಬಿಡಬಹುದು. ಆದರೆ ಇಂದು ನಮಗೆ ನಿಸರ್ಗ ಕುರಿತು ಹೇರಳ ಮಾಹಿತಿ ಸಿಗುತ್ತಿದೆ. ಪೂರ್ವಜರಿಂದ ಪಡೆದಿದ್ದೇನು, ನಮ್ಮಿಂದಾಗುತ್ತಿರುವ ತಪ್ಪುಗಳೇನೇನು, ಮುಂದಿನವರಿಗೆ ಉಳಿಸಬೇಕಾದುದು ಏನೇನು ಎಂಬ ಪ್ರಶ್ನೆಗಳಿಗೆ ನೈತಿಕವಾದ ಉತ್ತರ ಸಿಗಬೇಕಾಗಿದೆ. ಖಂಡಿತವಾಗಿಯೂ ನಮ್ಮದು ಪರ್ವಕಾಲದ ಪೀಳಿಗೆ. ವಿಜ್ಞಾನ, ತಂತ್ರಜ್ಞಾನದಲ್ಲಿ ನಮ್ಮ ಸಾಧನೆ ಎಷ್ಟೇ ಇದ್ದರೂ ಅದಕ್ಕೆ ಸರಿಸಾಟಿಯಾಗಿ ನಮ್ಮ ವೈಫಲ್ಯಗಳೂ ಗುಡ್ಡದಷ್ಟಿವೆ. ಇತರ ಜೀವರಾಶಿಯನ್ನು ಹೊಸಕಿ ಹಾಕಿದ್ದೂ, ನಮ್ಮವರೇ ಹಸಿವಿನಿಂದ ಸಾವನ್ನಪ್ಪುತ್ತಿರುವುದೂ ಈ ವೈಫಲ್ಯಗಳ ದ್ಯೋತಕವಾಗಿವೆ. ನಮ್ಮ ಮೇಲೆ ಅಪಾರ ಹೊಣೆ ಇದೆ. ಅದನ್ನು ನಿಭಾಯಿಸುವ ಸಾಮರ್ಥ್ಯವೂ ನಮಗಿದೆ.

**ದೈವ ಸ್ವರೂಪವಾಗಿ ಭೂಮಿ**

ಭೂಮಿಯೊಡನೆ ಮಾನವ ಜನಾಂಗದ ಸಂಬಂಧ ಅನಾದಿಕಾಲದಿಂದಲೂ ಬೆಳೆದು ಬಂದಿದೆ. ಭೂಮಿಯು ಮಾನವನ ಬೆರಗಿಗೆ, ಭಯಕ್ಕೆ, ಪ್ರೀತಿಗೆ, ಗೌರವಕ್ಕೆ ಕಾರಣವಾಗಿದ್ದ ಕಾಲ ಒಂದಿತ್ತು. ನಿಸರ್ಗವನ್ನು ದೈವಿರೂಪದಲ್ಲಿ ಮುಖ್ಯವಾಗಿ ತಾಯಿಯಂತೆ ಕಂಡು ಪೂಜಿಸುವ ಆದಿಮಾನವ ಜನಾಂಗಗಳು ಪ್ರಪಂಚದಲ್ಲಿ ಹಲವೆಡೆ ಇದ್ದವು. ವೇದಕಾಲದ ಭೂಮಿಗೀತ ನಮಗೆಲ್ಲ ಪರಿಚಿತವೇ. ಆದರೆ ಬರಬರುತ್ತ ಮಾನವನು, ನಾಗರಿಕತೆಯ ವಿಕೃತರೂಪಗಳನ್ನು ಒಂದೊಂದಾಗಿ ತನ್ನದಾಗಿಸಿಕೊಳ್ಳುತ್ತ ಬಂದಂತೆ, ಪ್ರಕೃತಿಯ ಅನಂತವಾಗಿದ್ದ ಧಾರಾಳತೆಯನ್ನು ಎಗ್ಗಿಲ್ಲದೇ ಸೂರೆಗೊಳ್ಳತೊಡಗಿದ. ಮನುಷ್ಯರ ಎಣೆಯಿಲ್ಲದ ಸ್ವಾರ್ಥ ಕಂಡು ಭೂಮಿತಾಯಿ ಮರುಗಿದಳು, ನೊಂದಳು, ಬೆಂದಳು.

ಭಾರತೀಯ ಮನಸ್ಸನ್ನು ಮೊದಲಿನಿಂದಲೂ ಅತ್ಯಂತ ಆಳವಾಗಿ ಆಕರ್ಷಿಸಿರುವ, ಕಾಡಿರುವ ತತ್ವಪ್ರತೀಕವಾದ ಭೂಮಿಯ ಬಗ್ಗೆ ಮೊದಲ ಚಿಂತನೆ ಪ್ರಾರಂಭವಾದದ್ದು ಋಗ್ವೇದದಲ್ಲಿ. ಸರ್ವಭೂತ ಜಾತಗಳ ಹಿತಕ್ಕಾಗಿ ದ್ಯಾವಾ–ಪೃಥ್ವಿಗಳನ್ನು ಸೃಷ್ಟಿಸಲಾಯಿತು ಎಂಬುದು ಅಲ್ಲಿಯ ದೃಷ್ಟಿಕೋನ. ಭಾರತೀಯ ಸಂಸ್ಕೃತಿಯ ಮತ್ತು ಪುರಾಣಗಳ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದ್ದಾರೆ. ಖ್ಯಾತ ಭಾರತೀಯ ಶಾಸ್ತ್ರಜ್ಞ ಜಾನ್ಸೆನ್ ಮಿಲ್ಲರನ ಪ್ರಕಾರ ಈ ದ್ಯಾವಾ–ಪೃಥ್ವಿಯ ಸಂಯೋಗದಲ್ಲಿ ಭಾರತೀಯ ಮನಸ್ಸು ಕಂಡದ್ದು, ಕಂಡರಿಸಿದ್ದು, ಎಲ್ಲ ಸೃಷ್ಟಿಯ ವಿಕಾಸದ ಮೂಲ ಅಗತ್ಯತೆಯಾದ ದ್ರವ್ಯ

ಮತ್ತು ಚೈತನ್ಯದ ಮಿಲನವನ್ನು. ಭೂಮಿಯ ಬಗೆಗಿನ ಮೊದಲ ಭಾರತೀಯ ಚಿಂತನೆಯನ್ನು ಮೇಲುನೋಟಕ್ಕೆ ಅರ್ಥೈಸುವುದಾದರೆ ಅದು ಸಮೃದ್ಧತೆಗೆ, ಸೃಷ್ಟಿಗೆ ಸಂಕೇತ. ಆಕೆ ಪ್ರೀತಿಯಿಂದ, ವಾತ್ಸಲ್ಯದಿಂದ ಇಡೀ ಲೋಕವನ್ನು ಪೋಷಿಸುತ್ತಾಳೆ. ಈಕೆ ಜಗತ್ತಿಗೆ ತಾಯಿಯಾದ್ದರಿಂದ ಈ ಭೂಮಿಯ ಸಕಲ ಜೀವಿಗಳ ರಕ್ಷಣೆ ಆಕೆಯ ಮೇಲಿದೆ. ಕ್ಷಮೆ, ಸಹನೆ ಎಂಬೆರಡು ಮಹತ್ವದ ಮಾನವೀಯ ಗುಣಗಳನ್ನು ಆಕೆಯ ಹೆಸರಿಗೇ ಸೇರಿಸಲಾಗಿದೆ. ಭೂಮಿಗೆ ಕೊಲ್ಲುವ ಶಕ್ತಿಯೂ ಇದೆ ಎಂಬ ಮಾತು ಅಸ್ಪಷ್ಟವಾಗಿ ವೈದಿಕ ಸಾಹಿತ್ಯದಲ್ಲಿಯೇ ಪ್ರಕಟವಾಗುತ್ತದೆ.

ಋಕ್ಕುಗಳಲ್ಲಿ ಅಸ್ಪಷ್ಟವಾಗಿ ಕಾಣಿಸಿಕೊಂಡ ಈ ಅಂಶ ಇನ್ನುಳಿದ ಧಾರ್ಮಿಕ ಸಾಹಿತ್ಯಗಳಲ್ಲಿ ಆಳವಾದ ಚಿಂತನೆಗೊಳಗಾಗಿದೆ. ಭೂಮಿಗೆ ಇರುವ ಈ ಇನ್ನೊಂದು ವ್ಯಕ್ತಿತ್ವ ಸಾಕಷ್ಟು ಭಯಾನಕವಾಗಿಯೇ ಪ್ರಕಟವಾಗುತ್ತದೆ. ಇಲ್ಲೆಲ್ಲಾ ಆಕೆಯ ರೂಪಕ್ಕೆ, ಪ್ರೀತಿಯ ವಾತ್ಸಲ್ಯದ ಬೆಡಗು, ಸೌಂದರ್ಯ ಇಲ್ಲ. ಭಾರತೀಯ ಚಿಂತನೆಯ ಅತ್ಯಂತ ಮಹತ್ವದ ಪರಿಕಲ್ಪನೆಗಳಲ್ಲೊಂದಾದ 'ಋತ'ವೇ ಭೂಮಿಯ ಹಿಂಸೆಯ ಕಾರಣವನ್ನೂ ವಿವರಿಸುತ್ತದೆ ಎಂದಾಯಿತು. 'ಋತ'ವನ್ನು ಉಲ್ಲಂಘಿಸುವ, ಅದರ ವಿಕಾಸಕ್ಕೆ ಅಡ್ಡಿ ಮಾಡುವ ಶಕ್ತಿಗಳನ್ನು ಭೂಮಿ ನಿರ್ದಯವಾಗಿ ಕೊಲ್ಲುತ್ತದೆ. ಆದ್ದರಿಂದ ಇದು ಮೂಲತಃ ಭೂಮಿಯ ಧಾರಣತತ್ವಕ್ಕೆ ಪೋಷಿಸುವ ತತ್ವಕ್ಕೆ ಅನುಗುಣವಾಗಿಯೇ ಇದೆ. ಈ ಭೂಮಿ ತತ್ವಪ್ರತೀಕವನ್ನು ಪ್ರಾಚೀನ ನಾಗರಿಕತೆಗಳ ಬೌದ್ಧಿಕ ಸೃಷ್ಟಿ ಎಂದು ಸರಳೀಕರಿಸಲು ಸಾಧ್ಯವಿಲ್ಲ.

ಆಧುನಿಕ ಜ್ಞಾನದಲ್ಲಂತೂ ಫ್ರಾಯ್ಡ್, ಫ್ರೇಸರ್, ಯೂಂಗ್ ಮೊದಲಾದವರ ಚಿಂತನೆಗಳು ಭೂಮಿತತ್ವಕ್ಕೆ ಮತ್ತೆ ಹೊಸ ಆಯಾಮವನ್ನು ತಂದವು. ಮನುಷ್ಯನ ಬದುಕು ಮತ್ತು ಸಾಂಸ್ಕೃತಿಕ ವಿಕಾಸದ ನಡುವೆ ಈ "ಭೂಮಿ ತಾಯಿ" ವಹಿಸಿರುವ ಪಾತ್ರವನ್ನು ಅನೇಕ ಹಂತಗಳಲ್ಲಿ ವಿಶ್ಲೇಷಿಸಲಾಯಿತು. ಆದಿಭೌತಿಕ ತತ್ವಜ್ಞಾನದ ಆಧಾರದ ಮೇಲೆ ಸೃಷ್ಟಿಯಾಗಿರುವ ಅನೇಕ ತತ್ವಪ್ರತೀಕಗಳಿಗಿಂತ ಈ ಭೂಮಿ ತತ್ತ್ವ ಪ್ರತೀಕ ಭಿನ್ನ ಎಂಬ ಅಂಶವನ್ನು ಕೂಡಾ ನಾವಿಲ್ಲಿ ಗಮನಿಸಬೇಕಾಗಿದೆ. ಬಹುಪಾಲು ಆದಿಭೌತಿಕ ಪುರಾಣಗಳು ಈ ಲೋಕದ ವಾಸ್ತವವನ್ನು ಮರೆಮಾಡುವ, ತಿರುಚುವ, ಪರದೆಯನ್ನೆಳೆಯುವ ಕೆಲಸವನ್ನು ಮಾಡಿದರೆ ಭಾರತೀಯ ಪ್ರತೀಕ ಅತ್ಯಂತ ಪರಿಣಾಮಕಾರಿಯಾಗಿಯೇ ಈ ವಿಶ್ವದಲ್ಲಿ ಘರ್ಷಣೆಯನ್ನು ಸೂಚಿಸುತ್ತದೆ. ಚರಿತ್ರೆಯ ಹಿಂಸೆ ಮತ್ತು ದುಷ್ಟ ಶಕ್ತಿಯ ಸಮಸ್ಯೆಯನ್ನು ಮಂಡಿಸಿ, ಅದನ್ನು ದಾಟಿಸುವ ಶಕ್ತಿ ಇದೆ ಎಂದು ಹೇಳುವುದೇ ಭಾರತೀಯ ಭೂಮಿತತ್ತ್ವ ಪ್ರತೀಕದ ಆಶಯ. ಪ್ರಕೃತಿ ದರ್ಶನದ ಒಂದು ಭಾಗವೆಂಬಂತೆ ಈ **"ಭೂಮಿ"** ಕಂಡರೂ ಇನ್ನೂ ವಿಸ್ತಾರವಾದ ಅರ್ಥಗಳನ್ನು ಅದು ಒಳಗೊಳ್ಳುತ್ತದೆ.

**ಕುವೆಂಪು ಅವರ ಕಾವ್ಯದಲ್ಲಿ ಪ್ರಕೃತಿ ದರ್ಶನ**

ಇಪ್ಪತ್ತನೆಯ ಶತಮಾನದಲ್ಲಿ ಕರ್ನಾಟಕದ ಚರಿತ್ರೆ ಹೊಸ ಯುಗಕ್ಕೆ ಕಾಲಿಟ್ಟ ಹಾಗೆಯೇ ಕನ್ನಡ ಕಾವ್ಯ ಕೂಡಾ ಹೊಸ ದಿಕ್ಕಿಗೆ ಹರಿಯಿತು. ನಿಸರ್ಗವು ಬರೀ ತೆರೆ ಎನ್ನುವ ಭಾವನೆ ಹಿಂದೆ ಸರಿಯಿತು. ಮಾನವನ ಮನಸ್ಸು ಮತ್ತು ನಿಸರ್ಗ ಮೊದಲ ಬಾರಿಗೆ ಕನ್ನಡದಲ್ಲಿ ಮುಖಾಮುಖಿಯಾದವು. ಪ್ರಕೃತಿ ಎನ್ನುವುದು ಶುದ್ಧ ಐಂದ್ರಿಕ ಅನುಭವ ಹಾಗೂ ತಾತ್ವಿಕ ಶೋಧನೆ ಎರಡಕ್ಕೂ ಅದ್ಭುತವಾದ ಮಾಧ್ಯಮವಾಯಿತು. ಪರಿಸರದ ಕರಾಳತೆಯ ವಿರುದ್ಧ ಹತಾಶೆ, ದಣಿವು, ಸಿಟ್ಟು, ಪಲಾಯನದ ಆಸೆ ಎಲ್ಲವೂ ಬೆರೆತು ರೊಮ್ಯಾಂಟಿಕ್ ಕಾವ್ಯದ ಚೌಕಟ್ಟು ಸಿದ್ಧವಾಯಿತು. ಕನ್ನಡ ನವೋದಯದಲ್ಲಿ ಅತ್ಯಂತ ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶವೆಂದರೆ, ಪ್ರಕೃತಿಯ ದೈವೀಕರಣ. ಪ್ರಕೃತಿಯ ಪ್ರತಿಯೊಂದು ವಿಲಾಸವೂ, ವಿದ್ಯಮಾನವೂ, ಮತ್ತಾವುದೋ ಶಕ್ತಿಯ, ದೈವೀ ಶಕ್ತಿಯ ಸಾಕ್ಷಾತ್ಕಾರದಂತೆ ಕಾಣುತ್ತದೆ. ಒಂದಲ್ಲ ಒಂದು ರೀತಿಯ ಪರಿವರ್ತನೆ ಪ್ರಕೃತಿ

ದರ್ಶನದ ಅಂತಿಮ ಹಂತ. ಕುವೆಂಪು ಅವರ 'ಆನಂದಮಯ ಈ ಜಗ ಹೃದಯ' ಕವನ ಈ ವಿಚಾರವನ್ನು ತತ್ವೀಕರಿಸಿ ಹೇಳುತ್ತದೆ.

*ಆನಂದಮಯ ಈ ಜಗ ಹೃದಯ*
*ಏತಕೆ ಭಯ? ಮಾಣೊ*
*ಸೂರ್ಯೋದಯ ಚಂದ್ರೋದಯ*
*ದೇವರ ದಯ ಕಾಣೊ*
*ಬಿಸಿಲಿದು ಬರಿ ಬಿಸಿಲಲ್ಲವೊ*
*ಸೂರ್ಯನ ಕೃಪೆ ಕಾಣೊ*
*ಸೂರ್ಯನು ಬರಿ ರವಿಯಲ್ಲವೊ*
*ಆ ಭ್ರಾಂತಿಯ ಮಾಣೊ.*
*ರವಿವದನವೆ ಶಿವಸದನವೊ*
*ಬರಿ ಕಣ್ಣದು ಮಣ್ಣೊ*
*ಶಿವನಿಲ್ಲದೆ ಸೌಂದರ್ಯವು*
*ಶಿವಮುಖದ ಕಣ್ಣೊ*

(ಆನಂದಮಯ ಈ ಜಗ ಹೃದಯ)

ಈ ಸಾಲುಗಳ ಪ್ರಾತಿನಿಧಿಕವೆಂದರೆ ನವೋದಯದ ಪ್ರಕೃತಿ ದರ್ಶನದ ಒಂದು ಮುಖವನ್ನು ಸೂತ್ರೀಕರಿಸಿ ಹೇಳುತ್ತವೆ. ಪ್ರಕೃತಿಯನ್ನು ದೈವೀಕರಿಸುವ ಈ ದೃಷ್ಟಿಕೋನ ಹತ್ತೊಂಬತ್ತನೆಯ ಶತಮಾನದ ಇಂಗ್ಲೀಷ್ ರೊಮ್ಯಾಂಟಿಕ್ ಕವಿಗಳ ದೃಷ್ಟಿಕೋನಕ್ಕೆ ಅನೇಕ ದೃಷ್ಟಿಗಳಿಂದ ಹತ್ತಿರವಾದದ್ದು ಎಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಅಲ್ಲಿ ಕೂಡಾ ಪ್ರಕೃತಿಯ ವಿವರಗಳಲ್ಲಿ ದೈವವನ್ನು ಕಾಣುವ ಪ್ರಯತ್ನ ಮುಖ್ಯ. ಆಧುನಿಕ ಕನ್ನಡ ನವೋದಯ ಕಾವ್ಯದ ಪ್ರಕೃತಿದರ್ಶನ ರೂಪುಗೊಂಡದ್ದು ಬೇರೆ ರೀತಿಯ ಪ್ರೇರಣೆಗಳಿಂದ. ನವೋದಯ ಕಾವ್ಯದಲ್ಲಿ ಧರ್ಮ ಮತ್ತು ವಿಜ್ಞಾನಗಳ ನಡುವೆ ಘರ್ಷಣೆ ಇಲ್ಲ. ಬುದ್ಧಿ ಮತ್ತು ಭಾವಗಳ ನಡುವೆಯೂ ಘರ್ಷಣೆ ಇಲ್ಲ. ಇವೆಲ್ಲ ಅಪೂರ್ವವಾದ ಸಾಮರಸ್ಯವನ್ನು ಪ್ರಕಟಿಸುತ್ತವೆ. ನವೋದಯ ಕಾವ್ಯದ ಪ್ರಕೃತಿ ಆರಾಧನೆ, ಆಶಾವಾದ, ದುರಂತ ಪ್ರಜ್ಞೆಯ ಅಪ್ರಾಮುಖ್ಯತೆ, ಸ್ವಾತಂತ್ರ್ಯ ಮತ್ತು ಅಭಿವೃದ್ಧಿಯ ಜೊತೆ ಜೊತೆಯಲ್ಲಿಯೇ ಹೋಗುತ್ತದೆ. ಕನ್ನಡ ನವೋದಯದಲ್ಲೂ ಈ ನಿಲುವು ಅಂತರ್ಗತವಾಗಿರುವುದರಿಂದಲೇ ಅಲ್ಲಿ ಧರ್ಮ–ವಿಜ್ಞಾನಗಳ ನಡುವಣ ಘರ್ಷಣೆ ಇಲ್ಲ. ವಿಜ್ಞಾನದ ಸ್ವಾಯತ್ತತೆ, ಧರ್ಮ, ಸಂಸ್ಕೃತಿಗಳ ಕಡಿವಾಣ ಇರದ ಸ್ವಾಯತ್ತತೆ ಅತ್ಯಂತ ಅಪಾಯಕಾರಿ ಎಂದು ಇಪ್ಪತ್ತನೇ ಶತಮಾನದ ಚರಿತ್ರೆ ಸಾಕ್ಷಿ ಹೇಳುತ್ತದೆ.

**ಬೇಂದ್ರೆಯವರ ಕಾವ್ಯದಲ್ಲಿ ಭೂಮಿದರ್ಶನ**

ಬೇಂದ್ರೆಯವರ ಕಾವ್ಯಜಗತ್ತಿನ ಬೇರನ್ನು ಕಾಣಬೇಕಾದರೆ 'ಭಾವಗಿತ' ಕವನಕ್ಕೆ ಹೋಗಬೇಕು. ಈ ಬೇರಿನಿಂದ ಹೊರಟ ಸಮೃದ್ಧ ಕೊಂಬೆ ರೆಂಬೆಗಳು ಶ್ರಾವಣದ ಪದ್ಯಗಳು. ಬೇಂದ್ರೆಯವರ ಕಾವ್ಯದಲ್ಲಿ ಒಂದು ಇನ್ನೊಂದರಲ್ಲಿ ಬೆರೆತು, ಇನ್ನೆಲ್ಲೂ ಅದೇ ದರ್ಶನ, ಅದೇ ತಾತ್ವಿಕ ರೂಪಕ ಘಟಕ್ಕನೆ ಕಾಣಿಸಿಕೊಳ್ಳುವುದು ನಿಜಕ್ಕೂ ಅನುಭಾವವೇ. ಸ್ವಾತಂತ್ರ್ಯ, ಸೃಷ್ಟಿ, ಪ್ರೇಮ ಈ ಮೂರು ಪದ್ಯದ ಆಶಯಗಳು. ಸೃಷ್ಟಿ ಯಾವಾಗ ಸಾಧ್ಯ ಎಂಬ ಪ್ರಶ್ನೆಯ ಶೋಧನೆಯೇ ಕವನದ ಒಟ್ಟು ವಾತಾವರಣವನ್ನು ಸೂಚಿತವಾಗುವ ಆಶಯಗಳು ಸೂಚಿಸುವ ಉತ್ತರ ಸ್ವಾತಂತ್ರ್ಯದ ಸ್ಥಿತಿಯಲ್ಲಿ ಮಾತ್ರ ಸೃಷ್ಟಿಸಾಧ್ಯ. ಸ್ವಾತಂತ್ರ್ಯದ ಆಶಯ ಈ ಪದ್ಯದಲ್ಲಿ ಸ್ಪಷ್ಟವಾಗಿ ಹೊರ ಚಿಮ್ಮುತ್ತದೆ.

*ತಿರುಗುತ್ತಿತ್ತು ತನ್ನ ಸುತ್ತ ಮೂಕ ಭಾವಯಂತ್ರಾ*
*ಗರ್ಭಗುಡಿಯ ಗರ್ಭದಲ್ಲಿ ಪರಿನುಡಿಯುವ ಮಂತ್ರಾ*
*ಮೂಡಿ ಮೂಡಿ ಮುಳುಗಿ ಮುಳುಗಿ*
*ಮೊಳಗುವೊಲು ಸ್ವತಂತ್ರಾ*

(ಭಾವಗೀತ)

ಸೃಷ್ಟಿಶೀಲತೆಯ ಗರ್ಭದಲ್ಲಿ ಇರಲೇಬೇಕಾದ ಸ್ಥಿತಿ ಸ್ವಾತಂತ್ರ್ಯ ಅಥವಾ ಸೃಷ್ಟಿಶೀಲತೆ ಯಾರೂ ದಮನ ಮಾಡಲಾಗದ ಸ್ವಾತಂತ್ರ್ಯವನ್ನು ಮೊಳಗುತ್ತದೆ. 'ಲಹರಿ ಲಹರಿ ಕಂಪಬಳ್ಳಿ'ಯ ಸನ್ನಿವೇಶ, 'ದಾಂಗುಡಿಗಳ ಬಿಡುತಲಿತ್ತು, ಅರಳಲಿತ್ತು, ಪ್ರೇಮಾ'. ಈ

ಮುಕ್ಕೂಟದ ಐಕ್ಯತೆಯ ಸ್ಥಿತಿಯನ್ನು ನಿರ್ನಾಮ ಮಾಡಲೋ ಎಂಬಂತೆ ಪ್ರಸ್ತಾಪ ಬರುತ್ತದೆ. 'ಭಾವ–ಜೀವ' ಎಂಬ ಎರಡೂ ಅರ್ಥಗಳಲ್ಲಿ ತನ್ನ ಹುಟ್ಟಿನ, ಆಗುವಿಕೆಯ ಪ್ರಕ್ರಿಯೆಯಲ್ಲೇ ನೋವನ್ನು, ಕೇಡನ್ನು, ಅನಿವಾರ್ಯವಾಗಿ ಮುಖಾಮುಖಿಯಾಗಲೇಬೇಕಾಗುತ್ತದೆ. ಸ್ವಾತಂತ್ರ್ಯ, ಸೃಷ್ಟಿ, ಪ್ರೇಮಗಳ ಮುಕ್ಕೂಟ ನೋವನ್ನು, ಸಾವನ್ನು ಎದುರಾಗಲೇಬೇಕು ಎಂಬ ಅನುಭವವೇ ಈ ಪದ್ಯದ ತಿರುಳು. ಭೂಮಿ ತತ್ವಕ್ಕೆ ಸಂಬಂಧಿಸಿದ ಹಾಗೆ ಬೇಂದ್ರೆಯವರ ಶ್ರಾವಣ ತತ್ವದ ಚರ್ಚೆ ಬರುವುದು ಇಲ್ಲಿಯೇ. ಈ ಭೂಮಿ ರೂಪಕದೊಳಗೆ ಇನ್ನೊಂದು ರೂಪಕವಾಗಿ ಶ್ರಾವಣ ಕೆಲಸ ಮಾಡುತ್ತದೆ. ಅಂದರೆ ಭೂಮಿಯ ಮೇಲೆ ನಡೆಯುತ್ತಿರುವ ಘರ್ಷಣೆಗಳು, ಶ್ರಾವಣದಲ್ಲಿ ಪರಿವರ್ತಿತವಾಗಿ ತುಂಬು ಸಮೃದ್ಧತೆಯ, ಸಾಮರಸ್ಯದ ಸ್ಥಿತಿಯ ಸಂಕೇತವಾಗುತ್ತದೆ ಶ್ರಾವಣ. ಭೂಮಿತಾಯಿಯ ಚೊಚ್ಚಲ ಸಂಭ್ರಮದ ಕಾಲ ಅದು. ಆಗ ಆಕೆ ಹಸುರುಡುಗೆ ಉಡುವಳು, ಹೂ ಮುಡಿದುಕೊಳ್ಳುವಳು.

**ಕೆ.ಎಸ್.ನರಸಿಂಹಸ್ವಾಮಿಯವ ಕಾವ್ಯದಲ್ಲಿ ಭೂಮಿ**

ಆಧುನಿಕ ಕನ್ನಡ ಕಾವ್ಯದಲ್ಲಿ ಮಾನವತಾ ಉದಾರವಾದದ ಅತ್ಯುತ್ತಮ ಪ್ರತಿನಿಧಿ ಎಂದರೆ ಕೆ.ಎಸ್.ನರಸಿಂಹಸ್ವಾಮಿ. ಈ ಅಂಶ ಅವರ ತಾತ್ವಿಕತೆಯ ರೂಪಗಳನ್ನು ನಿರ್ಧರಿಸುವ ಜತೆಗೆ ಕಾವ್ಯಾಕೃತಿಗಳ ವಿನ್ಯಾಸವನ್ನೂ ನಿರ್ಧರಿಸಿದೆ. ಈ ತಾತ್ವಿಕತೆಯ ಮೂಲಭೂತ ಲಕ್ಷಣಗಳಾದ ತಾಳ್ಮೆ ಮತ್ತು ಪ್ರಗತಿಯ ಬಗೆಗಿನ ಶ್ರದ್ಧೆ ಸಾಮಾನ್ಯವಾಗಿ ಸೆಕ್ಯುಲರ್ ಆದ ಪರಿಭಾಷೆಯಲ್ಲಿ ವ್ಯಕ್ತವಾಗುತ್ತವೆ. ಭೂಮಿತಾಯಿ ಮೊದಲಿನಿಂದಲೂ ತನ್ನ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದಾಳೆ. ವಿಕಾಸವೆನ್ನುವುದು ಯಾರೋ ದಾನವಾಗಿ ಕೊಡುವಂತಹುದಲ್ಲ. ಅದನ್ನು ಮನುಷ್ಯನೇ ತನ್ನ ಶಕ್ತಿ ಸಾಮರ್ಥ್ಯಗಳಿಂದ ಪಡೆಯಬೇಕು. ಅದಕ್ಕೆ ತಕ್ಕ ಸಿದ್ಧತೆ, ಪರಿಣತಿ ತಯಾರಿ ಬೇಕು. ಅದನ್ನು ಕಲಿಸಿಕೊಡುವುದೇ ಭೂಮಿಯ ಜವಾಬ್ದಾರಿ. ತನ್ನ ಮಕ್ಕಳನ್ನು ಕಟುತರವಾದ ರೀತಿಯಲ್ಲಿ ಆಕೆ ತಯಾರು ಮಾಡುತ್ತಿದ್ದಾಳೆ. ಮನುಕುಲದ ಈ ಸಿದ್ಧತೆ ಉದ್ದೇಶ ಎಲ್ಲವೂ ಸುಗಮವಾಗಿರುವ ಹಾಗೇ ಕಾಣುತ್ತದೆ. ಭೂಮಿತಾಯಿಯ ಶಕ್ತಿಶಾಲೀ ವ್ಯಕ್ತಿತ್ವ ಹಬ್ಬಿ ನಿಂತಿದೆ. ಆದ್ದರಿಂದ ಮನುಕುಲದ ಇತಿಹಾಸದ ರಹಸ್ಯ ಬಿಡಿಸುವುದೆಂದರೆ ಭೂಮಿತಾಯಿಯ ವ್ಯಕ್ತಿತ್ವದ ರಹಸ್ಯವನ್ನು ಬಿಡಿಸಿದ ಹಾಗೆ. ಅಂಥ ವಿಶಾಲ ದೃಷ್ಟಿಕೋನದ ಹಿನ್ನೆಲೆಯಿಂದಲೇ ಕವನ ಪ್ರಾರಂಭವಾಗುತ್ತದೆ.

***ತಾಯ ಸೆರೆಯ ಬಿಡಿಸಿಕೊಂಡು***
***ಕಣ್ ತೆರೆಯುವ ಬದುಕಿಗೆಲ್ಲ***
***ಆದಿಶೇಷ ಹೊತ್ತ ಭೂಮಿ***
***ಆದಿಶೇಷದಂತಿದೆ.***
***ತನ್ನ ಸಾಲ ಸಲಿಸಿಕೊಂಡು***
***ಮಣ್ಣಾಗುವ ಬದುಕಿಗೆಲ್ಲ***
***ಆದಿಶೇಷ ಹೊತ್ತ ಭೂಮಿ***
***ಅಂತ್ಯ ಶೇಷದಂತಿದೆ.***

(ಭೂಮಿಗೀತ)

ಇಷ್ಟೊಂದು ವ್ಯಾಪಕ ಪ್ರೀತಿಯ ಹಿನ್ನೆಲೆಯಿಂದ ಮನುಷ್ಯ ಭೂಮಿಯ ಸಂಬಂಧ ಪ್ರಾರಂಭವಾದರೂ, ಅದು ಹಾಗೇ ಬರೀ ಪ್ರೀತಿಯ ಸಂಬಂಧವಾಗಿ ಮಾತ್ರ ಮುಂದುವರಿದಿಲ್ಲ. ಹಾಗೆ ಅದು ನಡೆದಿದ್ದರೆ ಮಾನವ ಇತಿಹಾಸ ಸುಂದರ ವಿಕಾಸದ ಕಥೆ ಮಾತ್ರವಾಗುತ್ತಿತ್ತು. ಆದರೆ ಮಾನವ ವಿಕಾಸಕ್ಕೆ ಕುರೂಪಿಯಾದ, ಉಗ್ರವಾದ, ರಕ್ತಸಿಕ್ತ ಮುಖವೂ ಇನ್ನೊಂದಿದೆ. ಮನುಷ್ಯನ ವಿಕಾಸ ಪಥವನ್ನು ಸಂಕಷ್ಟಮಯವಾಗಿ ಮಾಡಿರುವ ಅಂಶವೂ ಇದೆ.

**ಭೂಮಿಯ ಮಹತ್ವ**

ಜಗತ್ತಿನ ಎಲ್ಲ ದೇಶಗಳಲ್ಲಿ **ಏಪ್ರಿಲ್ 22ನ್ನು** "ಭೂ ದಿನ" (ಅರ್ಥ್–ಡೇ) ಎಂದು ಆಚರಿಸಲಾಗುತ್ತಿದೆ. ಅರ್ಥ್–ಡೇ ಅಂದರೆ ಭೂಮಿಯ ಭರ್ಥ್–ಡೇ. ಅಂದರೆ ಅಂದು ಭೂಮಿಯ ಹುಟ್ಟುಹಬ್ಬ. ಅಮ್ಮನ

ಹುಟ್ಟುಹಬ್ಬದ ದಿನ ಅವಳು ತುಂಬ ಸುಂದರವಾಗಿ, ನಗುನಗುತ್ತ ಓಡಾಡುವ ಹಾಗೆ ಭೂಮಾತೆಯ ಮಡಿಲಲ್ಲೂ ಈ ದಿನಗಳಲ್ಲಿ ಗಿಡಮರ ಹೂಬಳ್ಳಿ ಪಶು–ಪಕ್ಷಿಗಳಿಗೂ ಸಡಗರ–ಸಂಭ್ರಮ. ಅಮೇರಿಕಕ್ಕೆ ಮಾತ್ರ ಸೀಮಿತವಾಗಿದ್ದ ಈ ಹಬ್ಬವನ್ನು ಇಪತ್ತು ವರ್ಷಗಳ ನಂತರ ಜಾಗತಿಕ ಮಟ್ಟಕ್ಕೆ ಏರಿಸಲು ನಿರ್ಧರಿಸಿ 'ಅರ್ಥ್‌ಡೇ ನೆಡ್ ವರ್ಕ್' ಎಂಬ ಸಂಘಟನೆಯೊಂದು ಸಜ್ಜಾಯಿತು. ಉಪಗ್ರಹಗಳ ನೆರವಿನಿಂದ ಅದ್ದೂರಿಯ ಪ್ರಚಾರದೊಂದಿಗೆ 1990ರಲ್ಲಿ ಏಕಕಾಲಕ್ಕೆ 141 ದೇಶಗಳ ಯುವಜನರನ್ನು ಹುರಿದುಂಬಿಸಿ ಪರಿಸರ ರಕ್ಷಣೆಗೆ ಟೊಂಕ ಕಟ್ಟುವಂತೆ ಪ್ರೇರೇಪಣೆ ನೀಡಲಾಯಿತು. ನಾವು ಭಾರತೀಯರಿಗೆ ಭೂಮಿಯ ಪಾವಿತ್ರ್ಯದ ಕಲ್ಪನೆ ಹೊಸದೇನಲ್ಲ. ಪುರಾತನ ಕಾಲದಿಂದಲೂ ಭೂಮಿಯನ್ನು **'ಭೂಮಾತೆ'** ಎಂದು ಕರೆದು ಗೌರವ, ಆದರ ನೀಡುತ್ತ ಬಂದವರು ನಾವು. ನಮ್ಮಜನಪದರೇ ಭೂಮಿ ಕುರಿತು ಜನಪದ ಗೀತೆಯನ್ನು ರಚಿಸಿದ್ದಾರೆ. ಇದು ಎಲ್ಲರಿಗೂ ಸ್ಫೂರ್ತಿ ಮತ್ತು ಪ್ರೇರಣೆ.

***"ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ,***
***ಎಳ್ಳು ಜೀರಿಗೆಯಾ ಬೆಳೆಯೋಳ***
***ಎಳ್ಳು ಜೀರಿಗೆ ಬೆಳಿವಂಥ ಭೂಮ್ತಾಯ್ನ***
***ಎದ್ದೊಂದು ಗಳಿಗೆ ನೆನೆದೇನ...".***

**ಪರಾಮರ್ಶನ ಗ್ರಂಥಗಳು**


- ನಾಗೇಶ ಹೆಗಡೆ. (2022). *ಪ್ರತಿದಿನ ಪರಿಸರ ದಿನ.* ಭೂಮಿ ಬುಕ್ಸ್
- ನಾಗೇಶ ಹೆಗಡೆ. (2022). *ಇರುವುದೊಂದೇ ಭೂಮಿ.* ಭೂಮಿ ಬುಕ್ಸ್.
- ನಾಗೇಶ ಹೆಗಡೆ. (2016). *ಭೂಮಿಯೆಂಬ ಗಗನನೌಕೆ.* ಭೂಮಿ ಬುಕ್ಸ್.
- ನಾಗೇಶ ಹೆಗಡೆ. (2016). *ಮನುಕುಲ ರಕ್ಷಣೆಗೆ ಮಹತ್ವದ ದಿನಗಳು.* ಭೂಮಿ ಬುಕ್ಸ್.
- ನರಸಿಂಹಸ್ವಾಮಿ, ಕೆ.ಎಸ್. (1974). *ಆಯ್ದ ಕವನಗಳು.* ಕಾವ್ಯಾಲಯ ಪ್ರಕಾಶಕರು.